

ರಾಜ್‌ಕೋಟ್‌ನಲ್ಲಿ ಗಾಂಧಿ ಓದಿದ ‘ಆಲ್‌ಫ್ರೆಡ್ ಹೈಸ್ಕೂಲ್’



ಬಾಲಕ ಗಾಂಧಿಯ ತಪ್ಪೊಪ್ಪಿಗೆ ಪತ್ರವನ್ನು ಓದುತ್ತಿರುವ ತಂದೆ: ‘ಮೋಹನದಾಸ’ ಚಿತ್ರದ ಹೃದಯಂಗಮ ದೃಶ್ಯ

> **ಸ್ವತಂತ್ರ ಭಾರತದ ಆರಂಭದಲ್ಲಿ ಹಿರಿಯರೆಲ್ಲ ಒಮ್ಮತದಿಂದ ದೇಶದ ರಾಜ ರಸ್ತೆಗಳಿಗೆಲ್ಲ ಮಹಾತ್ಮಾ ಗಾಂಧಿ ಮಾರ್ಗವೆಂದು ಹೆಸರಿಟ್ಟರು. ಕ್ರಮೇಣ ಆ ರಸ್ತೆಗಳಲ್ಲಿ ಕಲ್ಲುಮುಳ್ಳುಗಳೇ ಹೆಚ್ಚು ಎಂದುಕೊಂಡು, ನಯವಾಗಿ ಜಾರಬಲ್ಲ, ಬೇಗ ಗುರಿ ತಲುಪಬಲ್ಲ ಒಳದಾರಿಗಳನ್ನು ಬಳಸಲಾರಂಭಿಸಿದರು. ಹಾಗಾಗಿ, ಹಿರಿಯರ ಕೈ ಹಿಡಿದು ನಡೆದ ನಿಜವಾದ ಗಾಂಧಿ ಮಾರ್ಗದ ಪರಿಚಯ ಆಗಲೇ ಇಲ್ಲ. ಕಿರಿಯರಿಗೆ ಗೊತ್ತಾದ ಗಾಂಧಿ ಮಾರ್ಗವೆಂದರೆ ಎಂ.ಜಿ. ರೋಡು ಮಾತ್ರ!**

ಅವನು ಕಿರುನಗುತ್ತಾ ‘ಐ ಲೈಕ್ ಬಾಲಿವುಡ್ ಸಿನಿಮಾ’ ಎಂದು ಸುಮ್ಮನಾದ. ಅದಿರಲಿ, ಗಾಂಧಿ ಅಪ್ರಸ್ತುತ ಎನ್ನುವವರ ಬಗ್ಗೆ ಹೇಳಿದೆನಲ್ಲಾ, ಅವರ ಬಗ್ಗೆ ಪಠ್ಯಪುಸ್ತಕಗಳು ಏನು ಹೇಳುತ್ತವೆ ನೋಡೋಣ ಎಂದು **DSERT (Department of State Educational Research and Training)** ಸಂಸ್ಥೆಗೆ ಹೋದೆ. ಅಲ್ಲಿ ಪ್ರಾಥಮಿಕ ಮಟ್ಟದಿಂದ ಹೈಸ್ಕೂಲ್ ಮಟ್ಟದವರೆಗೆ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುತ್ತಾರೆ. ಅಲ್ಲಿ ಸಿಗುವ ಎಲ್ಲ ಪಠ್ಯಪುಸ್ತಕಗಳನ್ನು ಒಂದಿಡೀ ದಿನ ಕುಳಿತು ತಿರುವಿ ಹಾಕಿದೆ. ಆಶ್ಚರ್ಯವೆಂದರೆ ಹೆಚ್ಚಿನ ಪಠ್ಯಗಳಲ್ಲಿ ಗಾಂಧಿ ನಾಪತ್ತೆಯಾಗಿದ್ದರು.

ಸಿನಿಮಾ ಮಾಡುವ ಆಸೆ ಮತ್ತಷ್ಟು ಗಟ್ಟಿಯಾಯಿತು.

ಈ ಚಿತ್ರ ಮಾಡುವ ಕುರಿತು ಮಿತ್ರರೊಂದಿಗೆ ಚರ್ಚಿಸುತ್ತಿದ್ದಾಗ, ‘ಯಾಕೆ ಈ ಚಿತ್ರ ಮಾಡುತ್ತಿದ್ದೀಯ? ಗಾಂಧಿಯ ಬದುಕಿನಲ್ಲಿ ಹೇಳಲಿಕ್ಕೆ ಏನು ಉಳಿದಿದೆ?’ ಎಂದು ಕೇಳಿದರು.

ಗಾಂಧಿ ನಮ್ಮ ದೇಶದವರು ಎನ್ನುವ ಒಂದೇ ಕಾರಣಕ್ಕೆ ಎಲ್ಲರ ತಿಳಿವಳಿಕೆಗೆ ನಿಲುಕುವ ವ್ಯಕ್ತಿ ಅವರಲ್ಲ. ಹೆಚ್ಚು ಹೆಚ್ಚು ಅರಿತಷ್ಟೂ ಅರಿಯುವುದಿನ್ನೂ ಬಹಳ ಉಳಿಯುತ್ತದೆ. ಜ್ಞಾನದ ಪರಿಧಿಗೆ ನಿಲುಕಿದ್ದಕ್ಕಿಂತ ನಿಲುಕಬೇಕಾಗಿರುವುದು ಗಾಂಧೀಜಿಯ ವಿಚಾರದಲ್ಲಿ ಇನ್ನೂ ಬಹಳ ಉಳಿಯುತ್ತದೆ ಎನ್ನುವುದು ನನ್ನ ಅಭಿಪ್ರಾಯ.

ಆನಂತರ ಚಿತ್ರಕಥೆಯ ಹಲವು ಡ್ರಾಫ್ಟ್‌ಗಳಾದವು. ಯಾಕೋ ಚಿತ್ರಕಥೆ ತೃಪ್ತಿ ಕೊಡುತ್ತಿರಲಿಲ್ಲ. ಯಾವುದೋ ಕತೆಯನ್ನೋ ಹೊಳಹನ್ನೋ ಆಧರಿಸಿ ಚಿತ್ರಮಾಡುವುದು ಒಂದು ರೀತಿಯಲ್ಲಿ ಸುಲಭ. ಈ ಬಯೋಪಿಕ್ ಇದೆಯಲ್ಲ, ಅದು ಒಂದು ತರಹದ ಚಾಲೆಂಜಿಂಗ್ ಕೆಲಸ.

ಇಲ್ಲಿಯವರೆಗೆ ಮಹಾತ್ಮಗಾಂಧಿಯವರನ್ನು ಕುರಿತು ಎರಡು ಪ್ರಮುಖ ಚಲನಚಿತ್ರಗಳು ಬಂದಿವೆ. ಒಂದು ರಿಚರ್ಡ್ ಆಟನ್‌ಬರೋ ತೆಗೆದ ‘ಗಾಂಧಿ’ ಮತ್ತು ಶ್ಯಾಂ ಬೆನಗಲ್ ತಯಾರಿಸಿದ ‘ಮೇಕಿಂಗ್ ಆಫ್ ಮಹಾತ್ಮ’. ಆದರೆ, ಯಾರೂ ಅವರ ಬಾಲ್ಯವನ್ನು ಕುರಿತು ಚಿತ್ರವೊಂದನ್ನೇಕೆ ಮಾಡಲಿಲ್ಲವೋ? ವಿಚಿತ್ರ ಎಂದರೆ ಮಹಾತ್ಮ ಗಾಂಧಿಯವರು ಕೂಡ ತಮ್ಮ ಆತ್ಮಕಥನದಲ್ಲಿ ಬಾಲ್ಯದ ಕುರಿತು ಹೇಳಿಕೊಂಡಿರುವುದು ಕೇವಲ ಮೂವತ್ತು ಪುಟಗಳಲ್ಲಿ ಮಾತ್ರ!

ನಾನಿಲ್ಲಿ ‘ಮಹಾತ್ಮ ಗಾಂಧಿ’ಯನ್ನು ಕುರಿತು ಹೇಳುತ್ತಿಲ್ಲ; ಮೋಹನದಾಸನೆಂಬ ಒಬ್ಬ ಸಾಮಾನ್ಯ ಬಾಲಕನ ಬಾಲ್ಯದ ಕತೆಯನ್ನು ಹೇಳುತ್ತಿದ್ದೇನೆ! ಅವನು ಹಿಂದಿಗೂ ಇಂದಿಗೂ ಮತ್ತು ನಾಳೆಗೂ ಪ್ರಸ್ತುತ. ಆದರೆ ಯಾರಿಗಾಗಿ ಈ ಚಿತ್ರ ಮಾಡುತ್ತಿದ್ದೇನೆ? ನನ್ನ ಪ್ರೇಕ್ಷಕರು ಯಾರು? ಮಕ್ಕಳೋ? ದೊಡ್ಡವರೊ?

## ಗಾಂಧಿಯೂರಿಗೆ ಪ್ರಯಾಣ

ಗಾಂಧಿಯ ಊರಿಗೆ ಹೋಗಿ ಬಂದರೆ ನನ್ನ ಅನೇಕ ಗೊಂದಲಗಳು ಬಗೆಹರಿಯಬಹುದು. ಮತ್ತು ಅವರ ಬಾಲ್ಯದ ಬಗ್ಗೆ ಇನ್ನೂ ಅನೇಕ ವಿಚಾರಗಳು ತಿಳಿಯಬಹುದು ಎಂದು ಮೂರು ವರ್ಷಗಳ ಹಿಂದೆ ಗುಜರಾತ್‌ಗೆ ಪ್ರಯಾಣ ಬೆಳೆಸಿದೆ.

ಮೊದಲು ರಾಜ್‌ಕೋಟ್ ತಲಪಿದೆವು. ಅಲ್ಲಿ, ‘ಗಾಂಧಿಯವರ ಮನೆ ಎಲ್ಲಿದೆ’ ಎಂದು ದಾರಿಹೋಕನೊಬ್ಬನನ್ನು ಕೇಳಿದೆವು ಅವನು ‘ಮಾಲೂಮ್ ನಹೀ’ ಎಂದ. ಗಾಂಧಿಯ ಊರಿನಲ್ಲಿ ಗಾಂಧಿಯೇ ಗೊತ್ತಿಲ್ಲ ಅನ್ನುವ ಇವನು ಮೂಢನೇ ಸರಿ ಎಂದುಕೊಂಡು ಎರಡನೆಯವನನ್ನು ವಿಚಾರಿಸಿದಾಗ ಅವನೂ ಗೊತ್ತಿಲ್ಲವೆಂದಾಗ ಅಚ್ಚರಿಯಾಯಿತು. ‘ಇದು ರಾಜ್‌ಕೋಟ್ ತಾನೆ’ ಎಂದಾಗ ‘ಹೌದು’ ಎಂಬ ಉತ್ತರ ಬಂತು. ಹಾಗಾದರೆ ಗಾಂಧಿಯ ನಾಡಿನಲ್ಲಿ ಗಾಂಧಿಯ ಬಗೆಗೆ ಗೊತ್ತಿಲ್ಲವೇ!? ಇಬ್ಬರೂ ಮೂರ್ಖರೇ ಇರಬೇಕು. ಆಟೋದವರನ್ನು ಕೇಳಿದರೆ ಗೊತ್ತಿರುತ್ತದೆ ಎಂದು ಆಟೋ ಒಂದನ್ನು ನಿಲ್ಲಿಸಿ ಕೇಳಿದಾಗ ಅವನೂ ತಲೆಯಾಡಿಸಬೇಕೆ! ಇದೇಕೋ ಸರಿಯಲ್ಲ ಎಂದು ಕೊನೆಗೆ ಪೊಲೀಸ್ ಸಹಾಯ ಕೋರಿದೆವು. ಅವರು, ‘ಗಾಂಧಿ ಓದಿದ ಸ್ಕೂಲ್ ಲೋಹನಾದಲ್ಲಿದೆ. ಇಲ್ಲಿಂದ ನಾಲ್ಕು ಕಿಲೋಮೀಟರ್ ಆಗುತ್ತದೆ ಬಹುಶಃ ಅವರ ಮನೆ ‘ಕಬಾ ಗಾಂಧಿ ನೆ ಡೇಲಾ’ ಕೂಡ ಅಲ್ಲೇ ಎಲ್ಲೋ